ಓ.ಎಸ್. ನಂ. 52/2019

ಪಿ.ಡಬ್ಲ್ಯೂ: 01 (Ramesh)

ದಿನಾಂಕ: 31-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 3 ನೇ ಪ್ರತಿವಾದಿ ಪರ – ಶ್ರೀ S.M ವಕೀಲರಿಂದ.**

ನಮ್ಮ ಒಟ್ಟು ಕುಟುಂಬದ ಆಸ್ತಿಯನ್ನು ನನ್ನ ತಂದೆಯ ಒಡಹುಟ್ಟಿದವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. 3 ನೇ ಪ್ರತಿವಾದಿ ಮಾರ್ಚ 2017 ರಲ್ಲಿ ಕ್ರಯಪತ್ರವಾದ ನಂತರ ಅವರ ಬಗ್ಗೆ ತಿಳಿದು ಬಂದಿರುತ್ತದೆ. 3 ನೇ ಪ್ರತಿವಾದಿ ದಿ: 24-04-1987 ರಲ್ಲಿ ರೂ 3 ಸಾವಿರಗೆ ಐಟಂ ನಂಬರ 3 ಆಸ್ತಿಯನ್ನು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪರವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು 3 ನೇ ಪ್ರತಿವಾದಿ ಈ ರೀತಿ ಮಾಡಿದ್ದಾರೆ.

ಆ ಬಗ್ಗೆ ನಾನೇನಾದರು ಠಾಣೆಯಲ್ಲಿ ದೂರು ನೀಡಿರುತ್ತೇನೆಯೇ ಎಂದರೆ 2017 ರಲ್ಲಿ ನಾನು ಭಾಗ ಕೇಳಲು ಹೋದಾಗ ನನಗೆ ಈ ಬಗ್ಗೆ ಗೊತ್ತಾಯಿತು. 3 ನೇ ಪ್ರತಿವಾದಿಯೇ ಈ ರೀತಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡ ಬಗ್ಗೆ ನನಗೆ ತಿಳಿದು ಬಂತು. 2017 ರ ನಂತರ ಸದರಿ ಕ್ರಯಪತ್ರದ ರದ್ಧತಿಗೆ ನಾನು ದಾವೆ ಸಲ್ಲಿಸಿದ್ದೇನೆಯೇ ಎಂದರೆ ಇಲ್ಲ.

ಐಟಂ ನಂಬರ 3 ಆಸ್ತಿ ರಲ್ಲಿ 2.70 ಎಕರೆಯನ್ನು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪರವರು ಕುಟುಂಬದ ಖರ್ಚಿಗಾಗಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು 3 ನೇ ಪ್ರತಿವಾದಿ ಈ ರೀತಿ ಮಾಡಿದ್ದಾರೆ. ಆ ಬಗ್ಗೆ ನಾನೇನಾದರು ಠಾಣೆಯಲ್ಲಿ ದೂರು ನೀಡಿರುತ್ತೇನೆಯೇ ಎಂದರೆ 2017 ರಲ್ಲಿ ನನಗೆ ತಿಳಿದು ಬಂದಿರುತ್ತದೆ.

ಐಟಂ ನಂಬರ 3 ಆಸ್ತಿರಲ್ಲಿ 2.70 ಎಕರೆಯನ್ನು ದಿ: 13-05-1992 ರಲ್ಲಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪರವರು ಕುಟುಂಬದ ಖರ್ಚಿಗಾಗಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು 3 ನೇ ಪ್ರತಿವಾದಿ ಈ ರೀತಿ ಮಾಡಿದ್ದಾರೆ.

ಐಟಂ ನಂಬರ 3 ಆಸ್ತಿರಲ್ಲಿ 3-28 ಎಕರೆಯನ್ನು ದಿ: 24-07-1989 ರಲ್ಲಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪರವರು ಕುಟುಂಬದ ಖರ್ಚಿಗಾಗಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು 3 ನೇ ಪ್ರತಿವಾದಿ ಈ ರೀತಿ ಮಾಡಿದ್ದಾರೆ.

ನನ್ನ ದೊಡ್ಡಪ್ಪ ಅಥವಾ ಆತನ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ದಾವಾ ಆಸ್ತಿಗಳು ನನ್ನ ತಂದೆಯ ಆಸ್ತಿಗಳಾದ ಕಾರಣ ಸೇರಿಸಿರುವುದಿಲ್ಲ.

ಐಟಂ ನಂಬರ 3 ಸ್ವತ್ತು ಈಗ ಮುದ್ದಪ್ಪನ ಹೆಸರಿಗೆ ಇದೆ ಎಂದರೆ ಹೌದು. ದಾವಾ ಬಾಕಿಯಿದ್ದಾಗಲೇ 3 ನೇ ಪ್ರತಿವಾದಿ ಆತನ ತಮ್ಮನಿಗೆ ದಾನಪತ್ರ ಬರೆದುಕೊಟ್ಟಿರುತ್ತಾನೆ. ಸದರಿ ಮ್ಯುಟೇಷನನ್ನು ನಾನು ಪ್ರಶ್ನಿಸಿರುತ್ತೇನೆ ಎಂದರೆ ಹೌದು. ನನ್ನ

ಅರ್ಜಿ ತಿರಸ್ಕಾರಗೊಂಡಿರುತ್ತದೆ ಎಂದರೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಇದ್ದ ಕಾರಣ ತಿರಸ್ಕಾರವಾಗಿರುತ್ತದೆ. ನಾನು ಅದನ್ನು ಮೇಲ್ಮನವಿಯಲ್ಲಿ ಪ್ರಶ್ನಿಸಿರುವುದಿಲ್ಲ.

ಮುದ್ದಪ್ಪ 3 ನೇ ಪ್ರತಿವಾದಿಯ ವಿರುದ್ಧ ಭಾಗಕ್ಕೆ ದಾವಾ ಹಾಕಿದ್ದ ಬಗ್ಗೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ 82 ನಮ್ಮ ಕುಟುಂಬದ ಆಸ್ತಿ ಎಂದರೆ ಅದು ನಮ್ಮ ದೊಡ್ಡಪ್ಪನಿಗೆ ಹೋಗಿರುತ್ತದೆ. ದಾವಾ ಐಟಂ ನಂಬರ 3 ಹಾಗೂ ಸರ್ವೆ ನಂಬರ 82 ನ್ನು 1992 ರಲ್ಲಿ ನನ್ನ ತಂದೆ, ನನ್ನ ದೊಡ್ಡಪ್ಪ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಅದೆಲ್ಲಾ ಸುಳ್ಳು ದಾಖಲಾತಿ ಮೇಲೆ 3 ನೇ ಪ್ರತಿವಾದಿ ಮಾಡಿಕೊಂಡಿರುತ್ತಾರೆ.

ಸರ್ವೆ ನಂಬರ 82 ಈಗ ರಾಮದಾಸರವರ ಹೆಸರಿನಲ್ಲಿದು, ಅವರನ್ನು ನಾನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಅದು ನನ್ನ ದೊಡ್ಡಪ್ಪನ ಭಾಗದ ಆಸ್ತಿ. ಐಟಂ ನಂಬರ 3 ಸ್ವಾಧೀನದಲ್ಲಿ ಖರೀದಿ ಮಾಡಿದಾಗಿದಾಗಿನಿಂದ 3 ನೇ ಪ್ರತಿವಾದಿಯೇ ಇದ್ದಾನೆ ಎಂದರೆ ಇಲ್ಲ. ಜಂಟಿ ಕುಟುಂಬದಲ್ಲಿದ್ದಾಗಲೇ ನನ್ನ ತಂದೆ, ನನ್ನ ದೊಡ್ಡಪ್ಪ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಅದೆಲ್ಲಾ ಸುಳ್ಳು ದಾಖಲಾತಿ ಮೇಲೆ 3 ನೇ ಪ್ರತಿವಾದಿ ಮಾಡಿಕೊಂಡಿರುತ್ತಾರೆ. ಐಟಂ ನಂಬರ 3 ರಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಐಟಂ ನಂಬರ 3 ನ್ನು 3 ನೇ ಪ್ರತಿವಾದಿ ಖರೀದಿ ಮಾಡಿದ ಬಗ್ಗೆ ನನಗೆ 2017 ರ ಮುಂಚೆಯೇ ಗೊತ್ತಿತ್ತು ಎಂದರೆ ಇಲ್ಲ. ಐಟಂ ನಂಬರ 3 ರಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಐಟಂ ನಂಬರ 1 ನ್ನು ನನ್ನ ಅಣ್ಣನ ಹೆಸರಿಗೆ ಹೇಗೆ ಹೋಯಿತು ಎಂದರೆ ಸುಳ್ಳು ದಾಖಲಾತಿ ನೀಡಿ ಮಾಡಿಸಿಕೊಂಡಿರಬಹುದು. ನಾವುಗಳು ಪಾಲುವಿಭಾಗವಾದ ಕಾರಣ ಆ ರೀತಿ ನನ್ನ ಹೆಸರು ಕಂಡುಬರುತ್ತಿದೆ ಎಂದರೆ ಸರಿಯಲ್ಲ. ನಾವುಗಳು ಈ ಮೊದಲೇ ಪಾಲುವಿಭಾಗವಾಗಿದ್ದು, 3 ನೇ ದಾವಾ ಆಸ್ತಿ ಬೆಲೆ ಬಾಳುವ ಆಸ್ತಿಯಾದ ಕಾರಣ ಅದನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.